'ಹೋಗೋಣ' ತಾಯಿ ಕಷ್ಟದಿಂದ ಹೇಳಿದ್ದು ಗಮನಕ್ಕೆ ಬಂದರೂ ಗಿರಿ ಗೆಲುವಾದ.

ಮದುವೆಗೆ ಯಾವ ಆಡಂಬರದ ಲೇಪವೂ ಇರಲಿಲ್ಲ. ಬಂದ ಹತ್ತಾರು ಜನರಲ್ಲಿ ಕೆಲವರನ್ನು ಗಿರಿ ತಂದೆ ತಾಯಿಗಳಿಗೆ ಪರಿಚಯಿಸಿದ. ದೇಸಾಯರಿನ್ನೂ ಅಸ್ವಸ್ಥ ಸ್ಥಿತಿಯಲ್ಲಿಯೇ ಇದ್ದರು. ಮಾತು, ನಗು, ಊಟ ಯಾವುದರಲ್ಲೂ ಆಸ್ಥೆ ಹುಟ್ಟುತ್ತಿಲ್ಲ. ತಮ್ಮ ಸೊಸೆಯಾಗುವ ವಿನತಾಳನ್ನು ನೋಡಿದರು. 'ಹುಡುಗಿ ಪರವಾಗಿಲ್ಲ' ಅನಿಸಿದರೂ 'ಇಷ್ಟು ಸಾಕೇ ತಮ್ಮ ಸೊಸೆಯಾಗಲು ಅರ್ಹತೆ' ಎಂಬ ದುಗುಡ. ಗಂಡನೊಂದಿಗೆ ಬಂದ ಅವಳು ನಮಸ್ಕರಿಸಿದಾಗಲೂ ಕೇವಲ ಅಭಿನಯಿಸಿದರೇ ಹೊರತು ಹೃತ್ಪೂರ್ವಕವಾಗಿ ಆಶೀರ್ವದಿಸಲು ಅವರಿಂದಾಗಲಿಲ್ಲ. ಆ ಮಗು 'ನಿಧಿ' ಅದೇನೋ ಸಂಭ್ರಮದಿಂದ ಪುಟು ಪುಟು ಓಡಾಡುತ್ತಿತ್ತು. ಗಿರಿ ತಪ್ಪು ತಿಳಿದಾನು ಸುಮ್ಮಗಿದ್ದರೆ ಎಂದು ಹೆದರಿ ಅದನ್ನು ಎತ್ತಿಕೊಂಡು ಆಡಿಸಲು ಪ್ರಯತ್ನಿಸಿ ಅದು ಅಪರಿಚಿತ ಮುಖ ನೋಡಿ ಚೀರಿದೊಡನೆ ತಟ್ಟನೆ ಇಳಿಸಿಬಿಟ್ಟರು. ಯಾರದೋ ಮಗುವನ್ನು ತಮ್ಮ ಮೊಮ್ಮಗು ಅಂತ ಒಪ್ಪಿಕೊಳ್ಳುವುದು ಅದೆಷ್ಟು ಹಿಂಸೆ ಎಂದು ಹಿಂಜರಿದ ಮನಸ್ಸು ಪಿಸುಗುಡುತ್ತಲೇ ಇತ್ತು.

ಅಲ್ಲಿ ಯಾರದ್ದೂ ಗುರುತು, ಪರಿಚಯವಿಲ್ಲ, ಮಾತಾಡಲು ವಿಷಯವಿಲ್ಲ, ಒಂದುರೀತಿ ಚಡಪಡಿಸುತ್ತಲೇ ಹೊತ್ತುಗಳೆದ ದೇಸಾಯರು ಸಮಾರಂಭ ಎಲ್ಲಾ ಮುಗಿದಿರುವುದನ್ನು ಗಮನಿಸಿ 'ಮಗನ ಬಳಿ ಬಂದು ಹೇಳಿದರು' ನಾವು ರಾತ್ರಿ ಬಸ್ಸಿಗೆ ಹೊರಟುಬಿಡ್ತೀವಪ್ಪ. ಇಲ್ಲಿ ಹೊತ್ತು ಹೋಗೋದಿಲ್ಲ ನನಗೆ.'

ಗಿರಿಗೆ ಬೆರಗು, ಬೇಸರ ಸಹ 'ಏನಪ್ಪಾ ನೀನು. ನೀವೇನು ಅತಿಥಿಗಳಾ ಹೀಗೆ ಗಡಿಬಿಡಿ ಮಾಡಿ ಹೊರಡೋದಕ್ಕೆ! ನೀವೀಗ ಹೋದರೆ ವಿನತಾನಾದ್ರೂ ಏನು ತಿಳಿದುಕೊಂಡಾಳು.'

ಅವನ ಆಕ್ಷೇಪಣೆಯನ್ನು ದೇಸಾಯರು ಲಕ್ಷಿಸಲಿಲ್ಲ. 'ಅವಳಿಗೆ ಹೇಳು ಇನ್ನೊಂದು ಸರ್ತಿ ಬರ್‍ತಾರೆ ಅಂತ.'

ನಿರುಪಾಯನಾಗಿ ನಿಂತ ಗಿರಿಗೆ ಏನೋ ಅನುಮಾನ. 'ಯಾಕೆ ಅಪ್ಪಾ, ಸೊಸೆ ಇಷ್ಟವಾಗಲಿಲ್ಲವೆ?' ಕೇಳಿದ. 'ನೀನು ಇಷ್ಟಪಟ್ಟ ಮೇಲೆ ಮುಗೀತು. ನಮ್ಮದೇನು?' ತಂದೆಯ ಮಾತು ಸಮರ್ಥನೆಯಾಗಿ ಅವನಿಗೆ ತೋರಲಿಲ್ಲ. 'ನಾಲ್ಕು ದಿನ ಇರಿ ನಮ್ಮ ಜತೆ' ಪರಸ್ಪರ ಅರ್ಥ ಮಾಡಿಕೊಳ್ಳೋದಿಕ್ಕೆ ಅವಕಾಶ ಮಾಡಿಕೊಡದೆ ಹೀಗೆ ಪಲಾಯನ ಮಾಡಿದರೆ ಹೇಗೆ?'

'ನಾಲ್ಕು ದಿನ?' ಉದ್ಗರಿಸಿದ ದೇಸಾಯರು ಆಗದು ಎಂಬಂತೆ ತಲೆ ಆಡಿಸಿ ಮುಂದುವರಿಸಿದರು. 'ನಿಮ್ಮದು ಮತ್ತೇನಾದರೂ ಕಾರ್ಯಕ್ರಮಗಳಿರಬಹುದು. ನಾವೇಕೆ ಮಧ್ಯೆ? ಅಂತೂ ನಿನ್ನ ಮದುವೆ ಆಯಿತಲ್ಲ, ಸಂತೋಷ. ಆ ಮೇಲೆ ಪುರಸೊತ್ತಾದಾಗ ಊರಿಗೆ ಹೆಂಡತಿ ಮಗಳೊಂದಿಗೆ ಬಾ. ನನಗೀಗ ಅರ್ಜಂಟಾಗಿ ಒಂದಷ್ಟು ಕೆಲಸವಿದೆ. ನಾನು ಹೋಗಲೇಬೇಕು.'

ಅಪ್ಪನ ಹಟಮಾರಿತನ ಮಗನಿಗೇನೂ ಹೊಸದಲ್ಲ. ಒತ್ತಾಯ ಮಾಡಿದರೂ ಅಪ್ಪ ಬಗ್ಗದ ಆಸಾಮಿ ಅಂತ ಗೊತ್ತೇ ಇತ್ತು. ಗಿರಿ ಅಸಹಾಯಕತೆಯಿಂದ ತಾಯಿಗೆ ಹೇಳಿದ. 'ಅಪ್ಪನಿಗೆ ನೀನಾದ್ರೂ ಹೇಳಮ್ಮ– ನಾಲ್ಕು ದಿನ ಇದ್ದು ಹೋಗಿ ಅಂದ್ರೇ...'

'ಮಾತು ಕೊಟ್ಟ ಹಾಗೆ ಮದುವೆಗೆ ಬಂದಿದೀವಲ್ಲಪ್ಪ... ಸಾಕು.' ಹೆಂಡತಿ ತನ್ನನ್ನು ನಿಯಂತ್ರಿಸುವ ಮೊದಲೇ ಥಟ್ಟನೆ ಹೇಳಿ ದೇಸಾಯರು ಪರಿಸ್ಥಿತಿಯನ್ನು ತಮ್ಮ ಕಡೆ ವಾಲಿಸಿಕೊಂಡರು.

ಮದುವೆಮನೆ, ಜನ ಇದಾರೆ. ಮದುಮಕ್ಕಳಿದಾರೆ. ಇಂಥ ಸಂದರ್ಭದಲ್ಲಿ ಗಂಡನ ಮೊಂಡಾಟ ಹೆಂಡತಿಯಾದವಳಿಗೆ ಸರಿಬರಲಿಲ್ಲ. ಆದರೆ ಅದು ವಾದಕ್ಕೆ ನಿಲ್ಲುವ ಸಮಯವೂ ಆಗಿರಲಿಲ್ಲ. ತಾಯಿ ಮಗನನ್ನು ಸಂತೈಸುತ್ತ ಹೇಳಿದಳು. 'ಸಮಾಧಾನ ಮಾಡಿಕೋ ಗಿರಿ. ಇವರು ಯಾವಾಗಲೂ ಹೀಗೇ. ನಿಂಗೂ ಗೊತ್ತಲ್ಲ. ಈಗ ಹೋಗ್ತೀವಿ. ಇವರು ಹೇಳಿದ ಹಾಗೆ ನೀವಿಬ್ರೂ